ಅಲ್ಲಿಂದ ಈಶಾನ್ಯಕ್ಕೆ ಸರ್ವೆ 57ನೆ ನಂಬರಿನಲ್ಲಿ ಸುಮಾರು 50 ಸರಪಣಿಗಳ ದೂರ ಸರ್ವೆ 55ನೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ವಾಯವ್ಯಕ್ಕೆ ಸರ್ವೆ 55ನೆ ನಂಬರಿನ ಪೂರ್ವ ಮೇರೆಯಲ್ಲಿ ಅದರ ಈಶಾನ್ಯ ಮೂಲೆಗ ಹೋಗುತ್ತದೆ; ಅಲ್ಲಿಂದ ಪೂರ್ವಕ್ಕೆ ಸರ್ವೆ 32ನೆ ನಂಬರಿನ ದಕ್ಷಿಣ ಮೇರೆಯಲ್ಲಿ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ.

ಪೂರ್ವಕ್ಕೆ.—ಅಲ್ಲಿಂದ ದಕ್ಷಿಣಕ್ಕೆ ಸೋನಹಳ್ಳಿ ಮತ್ತು ಮೇಟಿಕುಪ್ಪೆ ಗ್ರಾಮಗಳ ಮೇರೆಯಲ್ಲಿ ಸೋನಹಳ್ಳಿ, ಮೇಟಿಕುಪ್ಪೆ ಮತ್ತು ಹಿರಿಹಳ್ಳಿ ಗ್ರಾಮಗಳ ಮುಕ್ತುಪ್ಪೆಗೆ ಹೋಗುತ್ತದೆ; ಅಲ್ಲಿಂದ ನೈರುತ್ಯಕ್ಕೆ ಹಿರಿಹಳ್ಳಿ ಗ್ರಾಮದ ಸರ್ವೆ 17ನೆ ನಂಬರಿನ ಉತ್ತರಮೇರೆಯಲ್ಲಿ ಅದರ ವಾಯವ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ದಕ್ಷಿಣಕ್ಕೆ ಹಿರಿಹಳ್ಳಿ ಗ್ರಾಮದ ಸರ್ವೆ 17, 14 ಮತ್ತು 112ನೆ ನಂಬರುಗಳ ಪಶ್ಚಿಮ ಮೇರೆಗಳಲ್ಲ 112ನೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ಪಶ್ಚಿಮಕ್ಕೆ ಪೆಂಜಹಳ್ಳಿ ಗ್ರಾಮದ ಸರ್ವೆ 22ನ ನಂಬರಿನ ಉತ್ತರ ಮೇರೆಯಲ್ಲಿ ಅದರ ವಾಯವ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ಆಗ್ನೇಯಕ್ಕೆ ಆ ಸರ್ವೆ ನಂಬರಿನ ಪಶ್ಚಿಮ ಮೇರೆಯಲ್ಲಿಯೂ ಹಿರಿಹಳ್ಳಿ ಗ್ರಾಮದ ಸರ್ವೆ 111ನೆ ನಂಬರಿನ ಪಶ್ಚಿಮ ಮೇರೆಯಲ್ಲಿಯೂ 111ನೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ, ಪೂರ್ವಕ್ಕೆ ಹಿರಿಹಳ್ಳಿ ಗ್ರಾಮದ ಸರ್ವೆ 111ನೆ ನಂಬರಿನ ದಕ್ಷಿಣ ಮೇರೆಯಲ್ಲಿ ಹುಣಸೆಕುಪ್ಪೆ ಗ್ರಾಮದ ಸರ್ವೆ 6ನೆ ನಂಬರಿನ ವಾಯವ್ಯ ಮೂಲಗೆ ಹೋಗಿ, ಅಲ್ಲಿಂದ ದಕ್ಷಿಣಕ್ಕೆ ಹುಣಸೆಕುಪ್ಪೆ ಗ್ರಾಮದ ಸರ್ವೆ 6ನೆ ನಂಬರಿನ ಪಶ್ಚಿಮ ಮೇರೆಯಲ್ಲಿ ಅದರ ನೈರುತ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ನೈರುತ್ಯಕ್ಕೆ ಸರ್ವೆ 56ನೆ ನಂಬರಿನ ಪಶ್ಚಿಮ ಮೇರೆಯಲ್ಲಿ ಅದರ ನೈರುತ್ಯ ಮೂಲೆಗೆ ಹೋಗುತ್ತದೆ.

ದಕ್ಷಿಣಕ್ಕೆ.—ಅಲ್ಲಿಂದ ಅಂತರಸಂತೆ ಮತ್ತು ಮಂಜೇಗೌಡನಹಳ್ಳಿ ಗ್ರಾಮಗಳ ಮಧ್ಯೆ ಇರುವ ಎಲ್ಲೆಯಲ್ಲಿ ಮೇಲಿಹೇಳಿದ ಗ್ರಾಮಗಳ ಮತ್ತು ಮೇಟಿಕುಪ್ಪೆ ಸಂಸ್ಥಾನ ಜಂಗಲಿಯ ಮುಕ್ತುಪ್ಪೆಗೆ ಹೋಗುತ್ತದೆ.

ಪಶ್ಚಿಮಕ್ಕೆ.—ಅಲ್ಲಿಂದ ಸಂಸ್ಥಾನ ಜಂಗಲಿಯ ಪೂರ್ವ ಮೇರೆಯಲ್ಲಿ (ಎಲ್ಲೆಯ ರೇಖೆ) ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

ಷರಾಗಳು.

A ಈ ತಾಕಿನಲ್ಲಿ ಈ ಕೆಳಗೆ ನಮೂದಿಸುವ ದಾರಿಯ ಹಕ್ಕನ್ನು ಮಂಜೂರ್ಮಾಡಿ ಇದೆ:—

ಅಂತರಸಂತೆಯಿಂದ ಮಲಬಾರು ಎಲ್ಲೆಯ ಮೇಲಿನ ಕ್ಯಾನರಕ್ಕೆ ಹೋಗುವ ಗಾಡಿ ದಾರಿ, 12 ಅಡಿಗಳ ಅಗಲ, ಸುಮಾರು ಬಂದು ಮೈಲಿ ಬಂದುವರೆ ಫಲ್ಗಾಂಗುಗಳ ಉದ್ದ, ಜನರಿಗೂ ಜಾನ್ವಾರುಗಳಿಗೂ, ಗಾಡಿಗಳಿಗೂ, ಸರ್ವಕಾಲದಲ್ಲಿಯೂ ತಿರುಗಾಟಕ್ಕೆ ಬಿಟ್ಟುರತಕ್ಕದ್ದು. ಇದು ಅಂತರಸಂತೆ ಗ್ರಾಮದ ಸರ್ವೆ 56ನೆ ನಂಬರಿನ ವಾಯವ್ಯ ಮೂಲೆಯಿಂದ ದಕ್ಷಿಣಕ್ಕೆ ಸುಮಾರು 4 ಸರಪಣಿಗಳ ದೂರದಲ್ಲಿ ಬಂದು ಸ್ಥಳದಲ್ಲಿ ಜಂಗಲಿಯನ್ನು ಪ್ರವೇಶಿಸಿ, ಸರ್ವೆ 57ನೆ ನಂಬರಿನಲ್ಲಿ ನೈರುತ್ಯವಾಗಿ ಹೋಗಿ, ಸರ್ವೆ 56ನೆ ನಂಬರಿನ ನೈರುತ್ಯ ಮೂಲೆಯಿಂದ ಸುಮಾರು 44 ಸರಪಣಿಗಳ ದೂರದಲ್ಲಿ ಮಂಜೇಗೌಡನಹಳ್ಳಿಯ ಉತ್ತರ ಮೇರೆಯಲ್ಲಿ ಬಂದು ಸ್ಥಳದಲ್ಲಿ ಜಂಗಲಿಯನ್ನು ಬಿಟ್ಟು, ಮಂಜೇಗೌಡನಹಳ್ಳಿ ಅಂತರಸಂತೆ ಮತ್ತು ಮೇಟಿಕುಪ್ಪೆ ಸಂಸ್ಥಾನ ಜಂಗಲಿಯ ಮುಕ್ತುಪ್ಪೆಯಿಂದ ಸುಮಾರು 34 ಸರಪಣಿಗಳಲ್ಲಿ ಮಂಜೇಗೌಡನ ಹಳ್ಳಿಯ ಉತ್ತರ-ಮೇರೆಯಲ್ಲಿ ಬಂದು ಜಾಗದಲ್ಲಿ ಜಂಗಲಿಯನ್ನು ಪುನಃ ಪ್ರವೇಶಿಸಿ ಸರ್ವೆ 59ನೆ ನಂಬರಿನಲ್ಲಿ ಕ್ಯೆವರಕ್ಕೆ ಹೋಗುತ್ತದೆ.

ತಾರೀಖು 28ನೆ ಮಾರ್ಚ್ 1907.

ನಂ. ಫೈ. 7298-345—06, ಅಸಿಸ್ಟೆಂಟ್ ಕಮಿಷನರ್ ಮಿ॥ ವಿ. ಆರ್. ತ್ಯಾಗರಾಜ ಐಯ್ಯರ್, ಎಂ. ಎ., ಯವರು, ರಜಾವಿನಿಂದ ವಾಪಸು ಬಂದ ತರುವಾಯ ಕಂಟ್ರೋಲರವರ ಆಫೀಸಿಗೆ ಕೆಲಸಕ್ಕೆ ನೇಮಿಸಲ್ಪಡುವರು.

ಹುಕುಂ ಬಮೋಜೇಬ್,

ಕೆ. ಎಸ್. ಚಂದ್ರಶೇಖರ ಐಯ್ಯರ್,

ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರಿಟರಿ.